**OS.No.**16/2020
**ಡಿ ಡಬ್ಲ್ಯೂಃ3**

**ದಿಃ 09-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ನನಗೆ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರ ತಂದೆ ಬಸಪ್ಪರವರು ಸಂಬಂಧಿ ಅಲ್ಲ. ಬಸಪ್ಪರವರು ಮರಣ ಹೊಂದುವ ಕಾಲಕ್ಕೆ ಅವರಿಗೆ ಎಷ್ಟು ಜಮೀನು ಇತ್ತು ಎಂದು ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ಯಾರು ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವಾದಲ್ಲಿ ಯಾವೆಲ್ಲಾ ಆಸ್ತಿಗಳನ್ನು ಸೇರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಸಪ್ಪರವರಿಗೆ 4 ಜನ ಗಂಡು ಮಕ್ಕಳು ಇದ್ದರು ಎಂದರೆ ಸರಿ. ಮೃತ ವಾದಿ ಮತ್ತು 1 ನೇ ಪ್ರತಿವಾದಿ ನನಗೆ ತಿಳಿದಿರುವಂತೆ ಸರ್ಕಾರಿ ಕೆಲಸದಲ್ಲಿದ್ದರು ಎಂದರೆ ಸರಿ. ಅವರು ಎಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಿಯೇ ಅವರು ವಾಸವಿರುತ್ತಿದ್ದರು ಎಂದರೆ ಸರಿ. ಮೃತ ವಾದಿ ಮತ್ತು 1 ನೇ ಪ್ರತಿವಾದಿ ಸರ್ಕಾರಿ ಕೆಲಸ ಮಾಡುತ್ತಾ ಬೇರೆ ಕಡೆ ವಾಸವಿರುವುದರಿಂದ 2 ಮತ್ತು 3 ನೇ ಪ್ರತಿವಾದಿ ಅವರ ತಂದೆಯ ಜೊತೆ ಕೂಡಿಕೊಂಡು ಜಮೀನಿನ ವಹಿವಾಟು ಮಾಡುತ್ತಿದ್ದರು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. 2 ನೇ ಪ್ರತಿವಾದಿಯು ತಯಾರಿಸಿದ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ತಿಳಿದಿರುವಂತೆ ಬಸಪ್ಪರವರು ನನ್ನ ಸಮಕ್ಷಮ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ಪಾಲು ವಿಭಾಗ ಪತ್ರ ಮಾಡಿಲ್ಲ ಎಂದರೆ ಸರಿ. ಬಸಪ್ಪರವರು ಜೀವಂತ ಇದ್ದಾಗ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ನೋಂದಾಯಿತ ದಾಖಲೆ ಮಾಡಿರುವುದರಿಂದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಗೊತ್ತಿರುವಂತೆ ಬಸಪ್ಪ ಮತ್ತು ಅವರ 4 ಜನ ಗಂಡು ಮಕ್ಕಳ ನಡುವೆ ಪಾಲು ವಿಭಾಗ ಪತ್ರ ಆಗಿಲ್ಲ ಎಂದರೆ ಸರಿ. ಬಸಪ್ಪರವರಿಗೆ ಸಂಬಂಧಿಸಿದಂತೆ ಒಟ್ಟು ಕುಟುಂಬದ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಬಸಪ್ಪನ 4 ಜನ ಗಂಡು ಮಕ್ಕಳಿಗೆ ಸರಿ ಬರದ ಕಾರಣ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸಾಕ್ಷಿಯು ಅವರಿಬ್ಬರು ನೌಕರಿ ಮಾಡುವುದರಿಂದ ಅವರು ನೌಕರಿ ಮಾಡುವಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಬಸಪ್ಪನ 4 ಜನ ಗಂಡು ಮಕ್ಕಳು ಯಾವ ಯಾವ ಸರ್ವೆ ನಂಬರ್ ನ ಎಷ್ಟು ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಸಪ್ಪ ಮೃತಪಟ್ಟ ನಂತರ ಅವರ 4 ಜನ ಗಂಡು ಮಕ್ಕಳು ಅವರ ಜೀವನ ನಿರ್ವಹಣೆಗೆ ಇಂತಿಷ್ಟು ಜಮೀನು ಎಂದು ಸಾಗುವಳಿ ಮಾಡುತ್ತಾ ಬಂದಿರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ.

ನಮ್ಮ ಊರಿನಲ್ಲಿ ಬಸಪ್ಪರವರಿಗೆ ಸೇರಿದ ಒಂದು ಕಪ್ಪು ಹಂಚಿನ ಮನೆ

ಇರುತ್ತದೆ ಎಂದರೆ ಸರಿ. ತೋಟದಲ್ಲಿ ಒಂದು ಮನೆ ಇದ್ದು ವಿಭಾಗ ಆದ ನಂತರ ಆ ಮನೆಯನ್ನು ಕಟ್ಟಿಸಿಕೊಂಡಿರುತ್ತಾರೆ. ವಿಭಾಗ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ವಿಭಾಗದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಿಪಿ.88 ರಲ್ಲಿ ಇರುವ ಮನೆಯೇ ಸದರಿ ಕಪ್ಪು ಹಂಚಿನ ಮನೆ ಇರುತ್ತದೆ. ರಂಗಪ್ಪರವರು ನಿವೃತ್ತಿ ಹೊಂದಿದ ನಂತರ ಇದೇ ಮನೆಯಲ್ಲಿ ಅವರ ಹೆಂಡತಿಯ ಜೊತೆ ವಾಸವಿದ್ದರು ಎಂದರೆ ಸಾಕ್ಷಿಯು ಅವರು ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಪ್ಪು ಹಂಚಿನ ಮನೆಯಲ್ಲಿ ಈಗ ಮೃತ ವಾದಿಯ ಹೆಂಡತಿ ವಾಸವಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ದಾವಾದ ಬಗ್ಗೆ ಮಾಹಿತಿ ಇಲ್ಲದೇ ಇದ್ದರು ಸಹ 2 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.